ಕರ್ನಾಟಕ ರೇಷ್ಮೆ ಹುಳುಪನ ಬಿತ್ತನೆ, ಗೂಡು ಮತ್ತು ರೇಷ್ಮೆ ನೂಲು, ಕಾಯಿದೆ 1959ಕ್ಕೆ ಹಲವು ತಿದ್ದುಪಡಿಗಳನ್ನು ತರಲು ಉದ್ದೇಶಿಸಲಾಗಿದೆ.

ಆ) ರಾಜ್ಯದ ರೇಷ್ಮೆ ಬೆಳೆಗಾರರು, ರೇಷ್ಮೆ ಮೊಟ್ಟೆ ತಯಾರಕರು, ರೀಲರ್‌ಗಳು, ವರ್ತಕರು ಮತ್ತು ನೇಯ್ಗೆದಾರರ ಪ್ರತಿನಿಧಿಗಳ ಸಭೆ ಕರೆದು ಅವರ ಅಭಿಪ್ರಾಯಗಳು ಹಾಗೂ ವಿಶ್ವ ವ್ಯಾಪಾರ ಒಪ್ಪಂದ ಜಾರಿಗೆ ಬರುತ್ತಿರುವ ಹಿನ್ನಲೆಯಲ್ಲಿ ರಾಜ್ಯದ ರೇಷ್ಮೆ ವ್ಯವಸಾಯದಲ್ಲಿ ತೊಡಗಿರುವವರೆಲ್ಲರ ಹಿತಾಸಕ್ತಿ ಕಾಪಾಡಿ ರೇಷ್ಮೆ ವ್ಯವಸಾಯದ ಸಮಗ್ರ ಅಭಿವೃದ್ಧಿಗಾಗಿ ತಿದ್ದುಪಡಿಗಳನ್ನು ತರಲು ಉದ್ದೇಶಿಸಲಾಗಿದೆ.

ಸರ್ಕಾರಿ ಸ್ವಾಮ್ಯದ ರೇಷ್ಮೆ ಬಿತ್ತನೆ ಕೋಠಿಗಳ ವಿವರ.

1926(2566)

ಶ್ರೀ ಬಿ.ಎನ್.ಬಚ್ಚೇಗೌಡ(ಹೊಸಕೋಟೆ): ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸರ್ಕಾರಿ ಸ್ವಾಮ್ಯದ ರೇಷ್ಮೆ ಬಿತ್ತನೆ ಕೋಠಿಗಳ ಸಂಖ್ಯೆ ಎಷ್ಟು; ವರ್ಷಕ್ಕೆ ಎಷ್ಟು ರೇಷ್ಮೆ ಬಿತ್ತನೆ ಮೊಟ್ಟೆಗಳನ್ನು ಉತ್ಪಾದಿಸಲಾಗುತ್ತಿದೆ; ವಿವರ ನೀಡುವುದು;

ಆ) ರಾಜ್ಯದಲ್ಲಿ ಪರವಾನಿಗೆ ಪಡೆದಿರುವ ಖಾಸಗಿ ರೇಷ್ಮೆ ಬಿತ್ತನೆ ಕೋಠಿಗಳ ಸಂಖ್ಯೆ ಎಷ್ಟು; ಇವರು ವರ್ಷಕ್ಕೆ ಎಷ್ಟು ರೇಷ್ಮೆ ಬಿತ್ತನೆ ಮೊಟ್ಟೆಗಳನ್ನು ಉತ್ಪಾದನೆ ಮಾಡಲಾಗುತ್ತಿದೆ ತಿಳಿಸಿ.

ಇ) ಇತ್ತೀಚೆಗೆ ರೇಷ್ಮೆ ಬಿತ್ತನೆ ಕೋಠಿಗಳ ಗುಣಮಟ್ಟ ಕಳಪೆಯಿಂದಾಗಿ ರೈತರ ಬೆಳೆಗಳು ನಷ್ಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ ಏನೇನು ಕ್ರಮಗಳನ್ನು ಕೈಗೊಳ್ಳಲಾಗಿದೆ?

ಉ) ಬೈವೊಲ್ಟೈನ್ ರೇಷ್ಮೆ ಅಭಿವೃದ್ಧಿಗೆ ಸರ್ಕಾರ ತೆಗೆದುಕೊಂಡಿರುವ ಕಾರ್ಯಕ್ರಮಗಳೇನು, ವಿವರ ನೀಡುವುದು;

ಊ) ಸಮಗ್ರ ರೇಷ್ಮೆ ಕೃಷಿಯ ಹೊಸ ನೀತಿಯೇನಾದರೂ ಸರ್ಕಾರ ರೂಪಿಸಿದೆಯೇ ಇದ್ದರೆ ವಿವರ ನೀಡುವುದು?

ಶ್ರೀ ಎಂ.ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು):

ಅ) ಸರ್ಕಾರಿ ಸ್ವಾಮ್ಯದ ಬಿತ್ತನೆ ಕೋಠಿಗಳ ವಿವರ ಕೆಳಕಂಡಂತಿದೆ:

ರಾಜ್ಯ ಸರ್ಕಾರದ ಬಿತ್ತನೆ ಕೋಠಿಗಳು - 92

ಕೇಂದ್ರ ರೇಷ್ಮೆ ಮಂಡಳಿ ಬಿತ್ತನೆ ಕೋಠಿಗಳು - 7

2000-01ನೇ ಸಾಲಿನಲ್ಲಿ ಒಟ್ಟು 402.69 ಲಕ್ಷ ರೇಷ್ಮೆ ಮೊಟ್ಟೆಗಳನ್ನು ಉತ್ಪಾದಿಸಲಾಗಿದೆ.

ಆ) ರಾಜ್ಯದಲ್ಲಿ 744 ಖಾಸಗಿ ಬಿತ್ತನೆ ಕೋಠಿಗಳಿವೆ. 2000-01ನೇ ಸಾಲಿನಲ್ಲಿ ಒಟ್ಟು 1190.54 ಲಕ್ಷ ಮೊಟ್ಟೆಗಳನ್ನು ಉತ್ಪಾದಿಸಲಾಗಿದೆ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಉ) ರಾಜ್ಯದಲ್ಲಿ ದ್ವಿತಳಿ ರೇಷ್ಮೆ ಉತ್ಪಾದನೆಗೆ ಸರ್ಕಾರವು ಕೆಳಕಂಡ ಕ್ರಮಗಳನ್ನು ತೆಗೆದುಕೊಂಡಿದೆ:

1) ಮಿಶ್ರತಳಿ ರೇಷ್ಮೆ ಮೊಟ್ಟೆ ಉತ್ಪಾದನೆಗೆ ಬಳಸುವ ದ್ವಿತಳಿ ಶುದ್ಧ ತಳಿಗಳು ಆದ ಎನ್‌ಬಿ 4ಡಿ2 ಮತ್ತು ಎನ್‌ಬಿ 18 ತಳಿಗಳು ರಾಜ್ಯದ ಸ್ಥಳೀಯ ವಾತಾವರಣಕ್ಕೆ ಸೂಕ್ತವಾಗಿದ್ದು ವರ್ಷಪೂರ್ತಿ ಸಾಕಾಣಿಕೆ ಮಾಡಲಾಗುತ್ತಿದ್ದು, ಹೆಚ್ಚು ಇಳುವರಿ ನೀಡುವ ಸಿಎಸ್‌ಆರ್ ಸರ್ಕಾರಿ ತಳಿಗಳನ್ನು ಅನುಕೂಲಕರ ವಾತಾವರಣದಲ್ಲಿ ಅಂದರೆ ವರ್ಷದ ಆಗಸ್ಟ್ ಫೆಬ್ರವರಿ ಮಾಹೆಗಳಲ್ಲಿ ಸಾಕಣೆ ಮಾಡಿ, ಉತ್ತಮ ಬೆಳೆ ಪಡೆದು ಹೆಚ್ಚಿನ ಉತ್ಪಾದನೆ ಮತ್ತು ಉತ್ಪಾದಕತೆ ಪಡೆಯಬಹುದಾಗಿದೆ.

2) ಶುದ್ಧ ದ್ವಿತಳಿ ರೇಷ್ಮೆ ಹುಳುಗಳ ಮೂಲತಳಿಗಳ ಸಾಕಣೆಗೆ ಪ್ರತ್ಯೇಕ ಪಿ3, ಪಿ2 ಮತ್ತು ಪಿ1 ಕೃಷಿ ಕ್ಷೇತ್ರಗಳು ಮತ್ತು ಬಿತ್ತನೆ ಕೋಠಿಗಳನ್ನು ಆಯ್ಕೆ ಮಾಡಿ ಈ ಸಂಸ್ಥೆಗಳಲ್ಲಿ ಮಾತ್ರ ಮೂಲ ದ್ವಿತಳಿ ಹುಳು ಸಾಕಣೆ : ರೇಷ್ಮೆ ಮೊಟ್ಟೆ ಉತ್ಪಾದನೆ ಮಾಡುತ್ತಿರುವುದು.

3) ದ್ವಿತಳಿ ಶುದ್ಧ: ಸಂಕರಣ ರೇಷ್ಮೆ ಮೊಟ್ಟೆಗಳನ್ನು ಕಡ್ಡಾಯವಾಗಿ ಚಾಕಿ ಸಾಕಾಣಿಕಾ ಕೇಂದ್ರಗಳಲ್ಲಿ ಚಾಕಿ ಸಾಕಾಣೆ ಮಾಡಿ ರೇಷ್ಮೆ ಬೆಳೆಗಾರರಿಗೆ ವಿತರಿಸುತ್ತಿರುವುದು

4) ದ್ವಿತಳಿ ಶುದ್ಧ: ಸಂಕರಣ ರೇಷ್ಮೆ ಹುಳುಗಳ ಸಾಕಾಣೆಗೆ ಪೂರ್ವಭಾವಿ ವ್ಯವಸ್ಥೆಗಳನ್ನು ಹೊಂದಿರುವ ಹಾಗೂ ತಾಂತ್ರಿಕತೆಗಳನ್ನು ಅನುಸರಿಸುವ ರೇಷ್ಮೆ ಬೆಳೆಗಾರರನ್ನು ಆಯ್ಕೆ ಮಾಡಿ ಅವರಿಗೆ ತರಬೇತಿ ನೀಡಿ ದ್ವಿತಳಿ ಹುಳು ಸಾಕಣೆಗೆ ಪ್ರೇರೇಪಿಸುತ್ತಿರುವುದು.

5) ದ್ವಿತಳಿ ಶುದ್ಧ: ಸಂಕರಣ ರೇಷ್ಮೆ ಗೂಡುಗಳ ನೂಲು ಬಿಚ್ಚಾಣಿಕೆಗೆ ಸೂಕ್ತವಾದ ಮಲ್ಟಿ ಎಂಡ್ ಘಟಕಗಳ ಅಳವಡಿಕೆಗೆ ಸಾಲ ಸೌಲಭ್ಯ ಮತ್ತು ಸಹಾಯಧನ ನೀಡುತ್ತಿರುವುದು.

ಊ) ರೇಷ್ಮೆ ಕೃಷಿ ನೀತಿಯ ಕರಡನ್ನು ಸಿದ್ಧಪಡಿಸಿದ್ದು ಇದನ್ನು ಮುಖ್ಯವಾಗಿ ಗುಣಮಟ್ಟದ ರೇಷ್ಮೆ ಉತ್ಪಾದನೆಗೆ ಆದ್ಯತೆ ನೀಡಿ ಉತ್ಪಾದನೆ ಮತ್ತು ಉತ್ಪಾದಕತೆ ಹೆಚ್ಚಿಸಲು ಯೋಚಿಸಿ ರಾಜ್ಯದ ರೇಷ್ಮೆ ಬೆಳೆಗಾರರ ಹಿತ ಕಾಪಾಡಲು ಯೋಜಿಸಲಾಗಿದೆ.

ಸೇಡಂ ಪುರಸಭೆಯಲ್ಲಿ ಟೆಂಡರ್ ಕರೆಯದೆ ಕಾಮಗಾರಿಗಳನ್ನು ತುಕಡಿಯ ಆಧಾರದ ಮೇಲೆ ನೀಡಿರುವುದು.

1927(2463)

ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ(ಸೇಡಂ): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ಪುರಸಭೆಯಲ್ಲಿ 1.00 ಲಕ್ಷಕ್ಕಿಂತ ಹೆಚ್ಚಿನ ಅಂದಾಜುಪಟ್ಟಿಯ ಕಾಮಗಾರಿಯನ್ನು ಟೆಂಡರ್ ಕರೆಯದೇ ತುಕಡಿಯ ಆಧಾರದ ಮೇಲೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇಂತಹ ಕೆಲಸಗಳು ಕೇವಲ ಸೇಡಂ ಪುರಸಭೆಗೆ ಅನ್ವಯಿಸಲು ಏನಾದರೂ ಸುತ್ತೋಲೆ ಸರ್ಕಾರದ ಪತಿಯಿಂದ ನೀಡಲಾಗಿದೆಯೇ;

ಇ) ಸೇಡಂ ಪುರಸಭೆಯ ಸಣ್ಣ ಅಗಸಿ ಮತ್ತು ಹರಿಜನ ವಾರ್ಡ್, ವಾರ್ಡ್ ನಂ.13, 1.80 ಲಕ್ಷ ರೂಪಾಯಿ ಅಂದಾಜು ಪಟ್ಟಿಯಾಗಿರುವ ಕಾಮಗಾರಿಯನ್ನು ಟೆಂಡರು ಕರೆಯದೇ ತುಕಡಿ ಆಧಾರದ ಮೇಲೆ ಈಗಾಗಲೇ ಕಳಪೆ ದರ್ಜೆಯ ಕೆಲಸವಾಗಿರುವುದರ ಬಗ್ಗೆ ಸಾರ್ವಜನಿಕರು ದೂರಿರುವುದು ನಿಜವಲ್ಲವೇ;

ಈ) ಇದರ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮವೇನು?